ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದರ ಬಗ್ಗೆ ನಾನು ಆಗಲೇ ಹೇಳಿದೆ. ಬೆಂಕಿ ಅಪಘಾತದಲ್ಲಿ ಸತ್ತವರಿಗೆ ಏನು ಕಾಂಪನ್‌ಸೇಷನ್ ಕೊಡಬೇಕೋ ಅದನ್ನು ಕಂದಾಯ ಇಲಾಖೆಯವರು ಕೊಟ್ಟಿದ್ದಾರೆ. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ನಿಧಿಯಿಂದ ಕೂಡ ಪ್ರತಿಯೊಬ್ಬರಿಗೂ ೧೫೦೦ ರೂಪಾಯಿ ಕೊಟ್ಟಿದ್ದೇವೆ. ಅದಕ್ಕೆ ಏನು ನಿಗದಿ ಇಲ್ಲ.

ಒಬ್ಬರು ಮಾನ್ಯ ಸದಸ್ಯರು.—ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ ಹಳ್ಳಿಯಲ್ಲಿ ಸತ್ತವರಿಗೆ ಬಹಳ ಕಡಿಮೆ ದರದಲ್ಲಿ ಪರಿಹಾರವನ್ನು ಕೊಡುತ್ತಿದ್ದಾರೆ ಮತ್ತು ಅದೇ ಸಿಟಿಯಲ್ಲಿ ಸತ್ತವರಿಗೆ ೩ ರಿಂದ ೫ ಸಾವಿರ ರೂಪಾಯಿಗಳವರೆಗೆ ಕೊಟ್ಟಿರುವುದು ಇದೆ. ಆದ್ದರಿಂದ, ಹಳ್ಳಿಯಲ್ಲಿ ಸತ್ತವರಿಗೂ ಅಷ್ಟೇ ಪರಿಹಾರವನ್ನು ಕೊಡಿ. ಈ ರೀತಿ ತಾರತಮ್ಯ ಮಾಡುವುದು ಬೇಡ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾರತಮ್ಯ ಮಾಡತಕ್ಕದ್ದು ನಮ್ಮ ಖಾತೆಯಲ್ಲಿ ಇಲ್ಲ. ಎಷ್ಟು ಹಣ ಇರುತ್ತದೋ ಅದರ ಮೇಲೆ ಅವಲಂಬಿಸಿರುತ್ತದೆ, ಅಂತೆಯೇ ಕೊಡುತ್ತೇವೆ.

ಶ್ರೀ ಕೆ. ಪೆಚ್. ಶ್ರೀನಿವಾಸ್.—ಈ ರೀತಿ ಪರಿಹಾರ ಕೊಡುವುದಕ್ಕೆ ಸರ್ಕಾರದಲ್ಲಿರತಕ್ಕ ನಿಯಮಗಳು ಯಾವುದೋ ಕಾಲದಲ್ಲಿ ಹಾಕಿರತಕ್ಕವು. ಆದರ ಪ್ರಕಾರ, ಯಾವ ಅಪಘಾತವೇ ಆಗಲಿ, ಯಾವ ಪ್ರಮಾಣದ ನಷ್ಟವೇ ಆಗಿರಲಿ ತಹಶೀಲ್ದಾರರು ಇಷ್ಟು, ಅಸಿಸ್ಟೆಂಟ್ ಕಮೀಷನರ್ ಇಷ್ಟು, ಜಿಲ್ಲಾಧಿಕಾರಿಗಳು ಇಷ್ಟು ಕೊಡುವುದು ಎಂದು ಇದೆ. ಇದರಿಂದ ಏನಾಗಿದೆ ಎಂದರೆ, ಆಗಿರತಕ್ಕ ಅಪಘಾತಕ್ಕೂ ಮತ್ತು ನೀಡತಕ್ಕ ಪರಿಹಾರಕ್ಕೂ ಯಾವುದೇ ಕಲ್ಪನೆ ಇಲ್ಲವಾಗಿದೆ. ಆದುದರಿಂದ, ಸರ್ಕಾರದವರು ದಯವಾಡಿ ಇದನ್ನು ಪರಿಶೀಲನೆ ಮಾಡಿ ಏಕ ಕಾಲಕ್ಕೆ ತಕ್ಕಂತೆ ಅಂದರೆ ಈಗ ಆಗತಕ್ಕ ಅಪಘಾತಕ್ಕೆ, ನಷ್ಟಕ್ಕೆ ಸಂಬಂಧ ಇರುವ ರೀತಿಯಲ್ಲಿ ಪರಿಹಾರ ಕೊಡುವುದಕ್ಕೆ ಹೊಸ ನಿಯಮವನ್ನು ಏಕೆ ರೂಪಿಸಬಾರದು ? ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಒಳ್ಳೆಯ ಸಲಹೆ ಕೊಟ್ಟಿದ್ದೀರಿ. ಅದನ್ನು ಪರಿಶೀಲಿಸುತ್ತೇನೆ.

Damage of Bridge near Shanthigrama Banavase Village

612. SRI K. H. HANUME GOWDA (Hassan).—Will the Minister for Public Works be pleased to state.—

(*a*) whether it has come to the notice of the Government that the bridge in Shanthigrama Mosale Hosahalli road near Banavase Village, Shanthigrama hobli has been damaged recently ;

(*b*) whether it is a fact that the bridge was constructed 20 years ago and it is very difficult to pass through the bridge for moving traffic ;

(*c*) steps taken by Government to repair the bridge ?

SRI KAGODU THIMMAPPA (Minister for Public Works).—

(*a*) Yes. The brick masonry parapet wall is damaged partially.

(*b*) Yes.

(*c*) Widening of bridge has been proposed to be included under C.R.F. programme during 1981-82.

ಶ್ರೀ ಕೆ.ಹೆಚ್. ಹನುಮೇಗೌಡ.—ಇದು ಲೋಕೋಪಯೋಗಿ ಇಲಾಖೆಯ ರಸ್ತೆಯ ಮಧ್ಯದಲ್ಲಿ ರುವ ಸೇತುವೆ; ಇದರ ಅಗಲ ೯ ಅಡಿ ಮತ್ತು ಉದ್ದ ೭೦-೮೦ ಅಡಿ ಇದೆ. ಇದಕ್ಕೆ ಭಾಗಶಃ ಹಾನಿಯಾ ಗಿದೆಎಂದು ತಿಳಿಸಿದ್ದಾರೆ. ಈ ಸೇತುವೆಯ ಮೇಲೆ ಬಸ್ಸುಗಳು ಹೋಗುವುದಕ್ಕೆ ತೊಂದರೆಯಾಗಿ ಸೂಚಿಸಿ ಕೊಡುವುದಕ್ಕೆ ಒಂದು ಕಡೆ ಕೆ.ಎಸ್.ಆರ್.ಟಿ.ಸಿ.ಯ ಬಸ್ಸನ್ನು ತಂದು ನಿಲ್ಲಿಸಿದ್ದಾರೆ. ಇದು ನಿಜವೇ ?

† ಶ್ರೀ ಕಾಗೋಡು ತಿಮ್ಮಪ್ಪ.—ತೊಂದರೆಯಾಗಿರುವುದು ನಿಜ.

ಶ್ರೀ ಕೆ. ಹೆಚ್. ಹನುಮೇಗೌಡ.—ಅಲ್ಲಿ ಲಾರಿ ಹೋಗುವುದಕ್ಕಾಗುವುದಿಲ್ಲ. ಬಸ್ಸು ಹೋಗುವು ದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಕಳೆದ ೪-೫ ವರ್ಷಗಳಿಂದ ೧೫ ದಿನಗಳಿಗೆ ಒಮ್ಮೆ ಕಾಗದ ಬರೆಯುತ್ತಲೇ ಇದ್ದೇನೆ. ಇಷ್ಟಾದರೂ ಕೂಡ ಉದ್ದೇಶಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಆದ್ದರಿಂದ ಯಾವಾಗ ಆದನ್ನು ಮಾಡಿಕೊಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರಿಗೆ ಅಗತ್ಯವಾದ ಕೆಲವು ಕೆಲಸಗಳನ್ನು ಸೂಚನೆ ಮಾಡಿರಿ ಎಂದು ಹೇಳಿದೆ. ಅವರು ಯಾವ ಕೆಲಸವನ್ನು ಸೂಚನೆ ಮಾಡುತ್ತಾರೋ ಆದನ್ನು ಆದ್ಯತೆ ಮೇಲೆ ಈ ವರ್ಷ ತೆಗೆದುಕೊಳ್ಳುತ್ತೇವೆ. ಒಂದೊಂದು ಸಾರಿ ಏನು ಮಾಡುತ್ತಾರೆಂದರೆ, ಇಲ್ಲಿ ಪ್ರಶ್ನೆ ಮಂಡಿಸಿದ ನಂತರ ಕೇಳಿ ಇಂಥ ಕೆಲಸ ಮಾಡಿ ಎಂದು ಹೇಳುವುದು ಒಂದಾಗಿದ್ದರೆ ಮತ್ತೊಂದು ಕಡೆ ಅವರು ಇಂಥ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುವುದೂ ಒಂತ್ತೊಂದಾಗಿರುತ್ತದೆ. ಆದ್ದರಿಂದ, ಖಚಿತ ವಾಗಿ ಇಂಥದ್ದನ್ನೇ ಮಾಡಬೇಕೆಂದು ಕೇಳಿದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾಡಿಕೊಡುತ್ತೇವೆಂದು ಹೇಳಿದರೆ ಆಗಬಹುದು. ಆದನ್ನು ಬಿಟ್ಟು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ. ಯಾವುದನ್ನೂ ಖಚಿತವಾಗಿ ಹೇಳಬೇಕು.

ಅಧ್ಯಕ್ಷರು.—ಸರ್ಕಾರದ ಭಾಷೆಯೇ ಹಾಗೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ೯ ಅಡಿ ಸೇತುವೆ ಇರುವುದರಿಂದ ತೊಂದರೆ ಇರತಕ್ಕುದ್ದು ನಿಜ ಆದ್ದರಿಂದ ಆ ಸೇತುವೆಯನ್ನು ಅಗಲ ಮಾಡುವ ಕೆಲಸವನ್ನು ಈ ವರ್ಷ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Construction of Bus Stand at Khanapur

752 SRI N. B. SIRDESAI (Khanapur).—Will the Minister for Transport and Minor Irrigation be pleased to State:—

(*a*) whether it is a fact that MLA Khanapur and T.M.C. President, Khanapur have several times represented to Government for the construction of Bus Stand at Khanapur ;

(*b*) whether T. M. C. Khanapur has offered some land for the construction of Bus Stand at Khanapur.

(*c*) if so, the reasons for the delay in commencing the construction work ?

SRI M. M. J. SADYOJATHA (Minister for Transport and Minor Irrigation).—

(*a*) Yes.
(*b*) Yes.
(*c*) Due to financial constraints of the Corporation.

SRI N. B. SIRDESAI.—Sir, since the Government is feeling or experiencing financial constraints or paucity in respect of the construction of bus stand in Khanapur only, should we take it for